ಓ.ಎಸ್. ನಂಃ 324/2017

<u>**ಪಿಡಬ್ಲ್ಯೂಃ1**</u>

**ದಿನಾಂಕಃ 22.08.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

<u>**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜಿ.ಎಲ್.ಡಿ ವಕೀಲರಿಂದಃ**</u>

4. ನಮ್ಮ ತಂದೆ ಮತ್ತು ತಾಯಿಯ ಮರಣದ ನಂತರ ಈ ದಾವೆಯ ಆಸ್ತಿಗಳು ವಾದಿಗಳಿಗೆ ಹೋಗಬೇಕು ಎಂದು ನಿಪಿ.17 ರಲ್ಲಿ ಬರೆದಿರುವುದಿಲ್ಲ. 1 ನೇ ಪ್ರತಿವಾದಿಯು ನನ್ನ ತಾಯಿಯಾಗಿದ್ದು, ಅವರು ಈಗಲೂ ಸಹ ಜೀವಂತವಿದ್ದಾರೆ ಎಂದರೆ ಸರಿ. ನನ್ನ ತಂದೆಯಾದ ಸಿದ್ದೇಗೌಡರು ಮರಣ ಹೊಂದಿರುತ್ತಾರೆ ಎಂದರೆ ಸರಿ. ನಿಪಿ.17 ರ ಪ್ರಕಾರ ಪಾಲುವಿಭಜನೆ ಆದ ನಂತರದಲ್ಲಿ 1 ನೇ ಪ್ರತಿವಾದಿ ಮತ್ತು ನನ್ನ ತಂದೆಯನ್ನು ಕೇವಲ 2 ನೇ ಪ್ರತಿವಾದಿ ಮಾತ್ರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು 3 ಜನ ಮಕ್ಕಳೂ ಸಹ ನಮ್ಮ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದೇವು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ಮತ್ತು ನಮ್ಮ ತಂದೆಯನ್ನು ನಾವು 3 ಜನ ಮಕ್ಕಳು ನೋಡಿಕೊಳ್ಳುತ್ತಿದ್ದೇವು ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ.

5. 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಖಾಸ ಅಕ್ಕನ ಮಗಳು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು ಸೇರಿ 1 ನೇ ಪ್ರತಿವಾದಿ ಮತ್ತು ನನ್ನ ತಂದೆಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಾವು 3 ಜನ ಮಕ್ಕಳೂ ಸಹ ನಮ್ಮ ತಂದೆ ತಾಯಿಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದೇವು ಎಂದು ನುಡಿದಿರುತ್ತಾರೆ. ನನ್ನ ತಂದೆಯು ಅಂತ್ಯ ಕ್ರಿಯೇಗಳನ್ನು ಸಹ 2 ನೇ ಪ್ರತಿವಾದಿ ಮಾತ್ರ ತಮ್ಮ ಸ್ವಂತ ಖರ್ಚಿನಿಂದ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು 3 ಜನ ಮಕ್ಕಳೂಾ ಸಹ ನಮ್ಮ ತಂದೆಯ ಅಂತ್ಯಕ್ರಿಯೆಯನ್ನು ನಡೆಸಿರುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ತಂದೆಯವರ ಮರಣಕ್ಕೂ ಸಹ ನಾನು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ನನ್ನ ತಂದೆಯವರ ಅಂತ್ಯಕ್ರಿಯೇಗೆ ಯಾವುದೇ ಹಣವನ್ನು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

6. ತಮ್ಮ ಜೀವಿತಾವಧಿಯಲ್ಲಿಯೇ 1 ನೇ ಪ್ರತಿವಾದಿ ಮತ್ತು ನನ್ನ ತಂದೆಯಾದ ಸಿದ್ದೇಗೌಡರು ದಾವಾ ಐಟಂ ನಂ.1 ರ ಆಸ್ತಿಯನ್ನು 2 ನೇ ಪ್ರತಿವಾದಿಗೆ ನಿಪಿ.1 ರ ಹಕ್ಕು ಖುಲಾತೆ

ಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಅನಾರೋಗ್ಯದಿಂದ ಕೆ.ಆರ್.ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ 2 ನೇ ಪ್ರತಿವಾದಿಯು ಮೋಸದಿಂದ ಅವರನ್ನು ಕರೆದುಕೊಂಡು ಹೋಗಿ ನಿಪಿ.1 ರ ದಾಖಲೆಯನ್ನು ಸೃಷ್ಟಿಸಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

7. ದಿಃ 02.03.2017 ರಂದು ನಿಮ್ಮ ತಂದೆಯವರು ಕೆ.ಆರ್.ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು ಎಂದು ತೋರಿಸಲು ಯಾವುದಾದರೂ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಆಸ್ಪತ್ರೆಯಲ್ಲಿ ದಾಖಲೆಗಳು ದೊರೆತರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೇ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಿಪಿ.1 ರ ದಾಖಲೆಯನ್ನು ಬರೆದುಕೊಡುವ ಕಾಲಕ್ಕೆ ನನ್ನ ತಂದೆಯವರು ಆರೋಗ್ಯವಂತರಾಗಿದ್ದರೂ ಸಹ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಐಟಂ ನಂ.1 ರ ಆಸ್ತಿಯು 1 ನೇ ಪ್ರತಿವಾದಿ ಮತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಅವರ ಇಚ್ಛಾನುಸಾರ ಸದರಿ ಆಸ್ತಿಯನ್ನು ನಿಪಿ.1 ರ ಮೂಲಕ 2 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳು ಮೇಲೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರೂ ಸಹ 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆಯನ್ನು ಹೂಡಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಿಪಿ.1 ರ ಪ್ರಕಾರ ದಾವಾ ಐಟಂ ನಂ.1 ರ ಆಸ್ತಿಯನ್ನು 2 ನೇ ಪ್ರತಿವಾದಿಗೆ ಕೊಟ್ಟ ನಂತರ ನಾನು ಮತ್ತು 2 ನೇ ವಾದಿ ದಾವಾ ಐಟಂ ನಂ.1 ರಲ್ಲಿ ಬೆಳೆದಿದ್ದ ಬೆಳೆಗಳಿಗೆ ಬೆಳೆ ನಾಶ ಔಷಧಿಯನ್ನು ಸಿಂಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯವು ದಿನಪತ್ರಿಕೆಯಲ್ಲಿ ಬಂದಿರುತ್ತದೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿ ಹಣಕೊಟ್ಟು ಸದರಿ ಪ್ರಕರಟಣೆಯನ್ನು ಹಾಕಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವಿಷಯದ ಸಂಬಂದ 1 ಮತ್ತು 2 ನೇ ಪ್ರತಿವಾದಿಯರು ನನ್ನ, 2 ನೇ ವಾದಿಯ ಹಾಗೂ ನಮ್ಮ ಹೆಂಡತಿ ಮಕ್ಕಳ ವಿರುದ್ಧ ಕೆ.ಆರ್.ನಗರದ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 447/2017 ರಂತೆ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ದಾವಾ ಐಟಂ ನಂ.1 ರ ಆಸ್ತಿಗೆ ನಾವು ಅತಿಕ್ರಮಣ ಪ್ರವೇಶ ಮಾಡಬಾರದೆಂದು ಹೇಳಿ ಮಧ್ಯಂತರ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮಧ್ಯಂತರ ಆದೇಶ ಚಾಲ್ತಿಯಲ್ಲಿದ್ದಾಗಲೇ ನಾನು ಮತ್ತು 2 ನೇ ವಾದಿ ದಾವಾ ಐಟಂ ನಂ.1 ರ ಆಸ್ತಿಗೆ ಹೋಗಿ ಅಲ್ಲಿ ಬೆಳೆದಿದ್ದ ಭತ್ತವನ್ನು ಅಕ್ರಮವಾಗಿ ಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಗೆ ನಾನು ಮತ್ತು 2 ನೇ ವಾದಿ ಅತಿಕ್ರಮಣ ಪ್ರವೇಶ ಮಾಡಬಾರದೆಂದು ಶಾಶ್ವತ ನಿರ್ಬಂದಕಾಜ್ಞೆಯನ್ನು ಅಸಲು ದಾವೆ ಸಂಖ್ಯೆ 447/2017 ರಲ್ಲಿ ನ್ಯಾಯಾಲಯವು ತೀರ್ಪನ್ನು ಹೊರಡಿಸಿರುತ್ತದೆ ಎಂದರೆ ಸರಿ.

10. ಕೇವಲ 2 ನೇ ಪ್ರತಿವಾದಿಯೇ ದಾವಾ ಐಟಂ ನಂ.1 ರ ಆಸ್ತಿಯ ಮಾಲೀಕನಾಗಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಜೀವಿತಾವಧಿಯಲ್ಲಿ ದಾವಾ ಐಟಂ ನಂ.2 ರಿಂದ 4 ರ ಆಸ್ತಿಗಳಲ್ಲಿ ಪಾಲು ಕೇಳಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ.17 ರ ಪ್ರಕಾರ ನಮ್ಮ ಕುಟುಂಬದ ಎಲ್ಲ ಆಸ್ತಿಗಳು ಪಾಲು ವಿಭಜನೆಯಾಗಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.17 ರ ವಿಭಾಗಪತ್ರದಲ್ಲಿ ಇರುವ ಕುಟುಂಬದ ಎಲ್ಲ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೆ 1 ನೇ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸುವ ದುರುದ್ದೇಶದಿಂದ ಕೇವಲ 1 ನೇ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ಈ ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**